2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ಚಿಕ್ಕಮಗಳೂರು

<u>ಸತ್ರ ಮೊಕದ್ದಮೆ ನಂಃ 13/2021</u>

| | | | |
|---|---|---|---|
| ಸಾಕ್ಷಿದಾರರ ಹೆಸರು | - ನಾಗರಾಜ | | ಪಿಡಬ್ಲೂ - 09 |
| ತಂದೆಯ ಹೆಸರು | - ಸಣ್ಣೇಗೌಡ | | ಸಿಡಬ್ಲೂ - 13 |
| ವಯಸ್ಸು | - 42 ವರ್ಷ | | |
| ಉದ್ಯೋಗ | - ಸೆಂಟರಿಂಗ್ ಕೆಲಸ | | |
| ವಾಸ ಸ್ಥಳ | - ಕುರಿಚಿಕ್ಕನ ಹಳ್ಳಿ, ಹರಪ್ಪನ ಹಳ್ಳಿ. | | |

ದಿನಾಂಕಃ **21.06.2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**.**

<u>ಮುಖ್ಯ ವಿಚಾರಣೆ **:** ಸರ್ಕಾರಿ ಅಭಿಯೋಜಕರಿಂದ**-**</u>

1. ಆರೋಪಿತನ ಪರಿಚಯ ಇದೆ, ಆತ ನಮ್ಮ ಸಂಬಂಧಿ. ಚಾಸಾ.1 ಗೊತ್ತು. ಚಾಸಾ.14 ಪರಿಚಯ ಇದೆ. ಚಾಸಾ.16 ರವರ ಪರಿಚಯ ಇಲ್ಲ. ಚಾಸಾ.9 ರವರ ಪರಿಚಯ ಇಲ್ಲ. ಮೃತ ಮಗು ಲೋಲಾಕ್ಷಿ ಗೊತ್ತಿಲ್ಲ. ನನಗೆ ಈ ಪ್ರಕರಣದಲ್ಲಿ ಯಾವುದೇ ಮಾಹಿತಿ ಇಲ್ಲ. ನಾನು ಪೋಲೀಸರಲ್ಲಿ ಯಾವುದೇ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅಭಿಯೋಜಕರು ಅನುಮತಿ ಕೇಳಿರುತ್ತಾರೆ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)

<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ**-**</u>

2. ದಿಃ 12.09.2020 ರಂದು ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ತನಿಖಾಧಿಕಾರಿಯವರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಚಾಸಾ.1 ನನ್ನ ಚಿಕ್ಕಮ್ಮನ ಮಗಳು ಎಂದರೆ ಸರಿ. ಅವಳು ಮದುವೆಯಾಗಿ ಗಂಡನಿಂದ ವಿಚ್ಛೇದನ ಪಡೆದ ವಿಚಾರ ಗೊತ್ತಿರುತ್ತದೆ ಎಂದರೆ ಸರಿ. 2018 ರಲ್ಲಿ ಆಕೆ ಆರೋಪಿ ಜೊತೆ ಪ್ರೀತಿಸಿ ಎರಡನೇ ಮದುವೆಯಾಗಿರುತ್ತಾಳೆ ಎಂದರೆ ನನಗೆ ಗೊತ್ತಿಲ್ಲ. ಮದುವೆಯಾದ ನಂತರ

ಚಾಸಾ.1 ರವರು ನನಗೆ ಕರೆ ಮಾಡಿ ಆರೋಪಿತನು ಸಣ್ಣ ಪುಟ್ಟ ವಿಚಾರಕ್ಕೆ ಬೈಯ್ದು ಗಲಾಟೆ ಮಾಡಿ ಮಾನಸಿಕ ಮತ್ತು ದೈಹಿಕ ಕಿರುಕುಳ ನೀಡಿರುತ್ತಾನೆ ಎಂದು ನನಗೆ ತಿಳಿಸಿದ್ದಾಳೆ ಎಂದರೆ ಸರಿಯಲ್ಲ.

3. ದಿಃ 06.01.2020 ರಂದು ಚಾಸಾ.1 ರವರಿಗೆ ಲೊಲಾಕ್ಷಿ ಎಂಬ ಹೆಣ್ಣುಮಗು ಜನನವಾಗಿ ಅವಳು ಅವರ ಸಂಬಂಧಿಕರ ಮನೆಗೆ ಬೆಂಗಳೂರಿನಲ್ಲಿ ಬಾಣಂತನಕ್ಕೆ ಹೋಗಿ 4 ತಿಂಗಳ ನಂತರ ಆರೋಪಿತನ ಮನೆಗೆ ಬಂದಾಗ ಆರೋಪಿತನು ಹೆಣ್ಣು ಮಗು ಜನಿಸಿದ ಕಾರಣ ಬೀಗವನ್ನು ಕೊಡದೆ ಗಲಾಟೆ ಮಾಡಿ ಚಾಸಾ.1 ರವರಿಗೆ ದೈಹಿಕ ಮತ್ತು ಮಾನಸಿಕ ಹಿಂಸೆ ನೀಡಿರುತ್ತಾನೆಂದು ನನಗೆ ತಿಳಿಸಿರುತ್ತಾಳೆಂದರೆ ಸರಿಯಲ್ಲ.

4. ದಿಃ 10.09.2020 ರಂದು ನಾನು ಕೆಲಸ ಮಾಡುತ್ತಿರುವಾಗ ಚಾಸಾ.1 ರವರು ನನಗೆ ಕರೆ ಮಾಡಿ ಆರೋಪಿತನು ಅವಳ ಮಗು ಲೋಲಾಕ್ಷಿಯನ್ನು ಮನೆಯಲ್ಲಿದ್ದ ನೀರಿನ ಬಕೆಟಿನಲ್ಲಿ ಮುಳುಗಿಸಿ ಕೊಲೆ ಮಾಡಿರುತ್ತಾನೆಂದು ಹಾಗೂ ಮಗುವಿನ ಶವವನ್ನು ಲಕ್ಷ್ಮೀ ಆಸ್ಪತ್ರೆಗೆ ತೆಗೆದುಕೊಂಡು ಹೋಗಿರುವುದಾಗಿ ತಿಳಿಸಿರುತ್ತಾಳೆಂದರೆ ಸರಿಯಲ್ಲ. ಈ ಬಗ್ಗೆ ನಾನು ದಿಃ12.09.2020 ರಂದು ಈಗ ಓದಿ ಹೇಳಿದ ನಿಪಿ.22 ರಂತೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ.

5. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು: ಆರೋಪಿ ಪರವಾಗಿಃ</u>

6. ಇಲ್ಲ

S.C. 13-2021    PW. 09

<u>ಮರುವಿಚಾರಣೆ: ಇಲ್ಲ</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ